**ದಿನಾಂಕ : 01.12.2011ರ ಗುರುವಾರ ಪೂರ್ವಾಹ್ನ 11.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಸಜಿಲ್ ಕೃಷ್ಣ.ಪಿ. ರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ನಡೆಯುವ ಪ್ರಾಧಿಕಾರದ ಸಾಮಾನ್ಯ ಸಭೆಯ ನಡಾವಳಿ.**

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ (ದಿನಾಂಕ: 29.09.2011ರ ಸಭೆಯ) ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭೆಯ ನಡಾವಳಿಯನ್ನು ಓದಿ ಅಂಗೀಕರಿಸಲಾಯಿತು.

**2) ವಿಷಯ ಸಂಖ್ಯೆ :2**

2011ನೇ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 32,664.00 |
| 2. | ಕೆ.ಟಿ.ಸಿ.ಖಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 4,60,605.00 |
| 3. | ಪತ್ರಿಕಾ ಪ್ರಕಟಣೆ ಶುಲ್ಕ | ರೂ. | 10,000.00 |
| 4. | ಇತರೆ ಜಮೆ | ರೂ. | 660.00 |
| | **ಒಟ್ಟು ಜಮೆ** | **ರೂ.** | **5,03,929.00** |

**ಖರ್ಚು**

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆ | ರೂ. | 38,062.00 |
| 2. | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 49,316.00 |
| 3. | ಸಿಬ್ಬಂದಿ ವೇತನ | ರೂ. | 40,162.00 |
| 4. | ದೂರವಾಣಿ ವೆಚ್ಚ | ರೂ. | 4,443.00 |
| 5. | ವಿದ್ಯುತ್ಶಕ್ತಿ ದುರಸ್ತಿ ಮತ್ತು ವಿದ್ಯುತ್ಶಕ್ತಿ ವೆಚ್ಚ | ರೂ. | 3,754.00 |
| 6. | ಆಯುಕ್ತರ ಪ್ರಯಾಣ ಭತ್ಯೆ | ರೂ. | 750.00 |
| 7. | ಕಂಪ್ಯೂಟರ್ ವೆಬ್‌ಸೈಟ್ ನಿರ್ವಹಣೆ ವೆಚ್ಚ ಮೆ॥ ಪ್ರೀಮಿಯರ್ ಟೆಕ್ನಾಲಜಿ ರವರಿಗೆ ಪಾವತಿ | ರೂ. | 5,000.00 |
| 8. | ಪೀಠೋಪಕರಣಗಳ ಖರೀದಿ ಮೆ॥ಡೆಕೋರೇಟಿವ್ ಲ್ಯಾಮಿನೇಟ್ಸ್ ರವರಿಗೆ ಪಾವತಿ. | ರೂ. | 31,586.00 |
| 9. | ರಾಜ್ಯೋತ್ಸವ ದಿನಾಚರಣೆಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ವಂತಿಕೆ ಪಾವತಿ | ರೂ. | 2,000.00 |
| 10 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 755.00 |
| 11 | ಕಛೇರಿಯ ನೀರಿನ ಟ್ಯಾಂಕ್ ದುರಸ್ಥಿ ವೆಚ್ಚ | ರೂ. | 2,000.00 |
| 12 | ಪತ್ರಿಕಾ ಪ್ರಕಟಣೆ ವೆಚ್ಚ | ರೂ. | 48,662.00 |
| 13 | ಇತರೆ | ರೂ. | 60.00 |
| | **ಒಟ್ಟು ವೆಚ್ಚ** | **ರೂ.** | **2,26,550.00** |

**ಘೋಶ್ವಾರೆ:**

| | | | |
|---|---|---|---|
| 1. | ಸೆಪ್ಟೆಂಬರ್ 2011ರ ಪ್ರಾರಂಭಿಕ ಶಿಲ್ಕು | ರೂ. | 36,85,889.00 |
| 2. | 2011 ಸೆಪ್ಟೆಂಬರ್–ಅಕ್ಟೋಬರ್ ತಿಂಗಳ ಒಟ್ಟು ಜಮೆ | ರೂ. | 5,03,929.00 |
| 3. | ಒಟ್ಟು ಜಮೆ | ರೂ. | 41,89,818.00 |
| 4. | 2011 ಸೆಪ್ಟೆಂಬರ್–ಅಕ್ಟೋಬರ್ ತಿಂಗಳ ಖರ್ಚು | ರೂ. | 2,26,550.00 |
| 5. | 2011 ನೇ ಅಕ್ಟೋಬರ್ ತಿಂಗಳ ಆಖೈರು ಶಿಲ್ಕು | ರೂ. | **39,63,268.00** |
| 6. | ಠೇವಣಿ ಇಟ್ಟಿರುವುದು | ರೂ. | **30,00,000.00** |

ಮೇಲಿನ ಜಮಾ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–**ಮೇಲಿನ ಜಮಾ ಖರ್ಚುಗಳಿಗೆ ಸಭೆಯು ಅಂಗೀಕಾರ ನೀಡಿತು.

**3) ವಿಷಯ ಸಂಖ್ಯೆ 3:– ಅರ್ಜಿದಾರರು ಶ್ರೀಮತಿ ಬಿ.ಎಸ್.ವರದ.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಮಡಿಕೇರಿ ನಗರಸಭಾ ಬ್ಲಾಕ್ ನಂ.11ರ, ಸರ್ವೆ ನಂ.124/2 (ರೆ.ಸ.ನಂ.407/2)ರಲ್ಲಿನ 0.24ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಟೇಲ್ ಉದ್ಯಮ ನಡೆಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ಬಿ.ಎಸ್.ವರದ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ನಿವೇಶನವು ಮಡಿಕೇರಿ ನಗರಸಭಾ ವ್ಯಾಪ್ತಿಯೊಳಗೆ ಬರುತ್ತಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತದೆ. ನಿವೇಶನದ ಪಶ್ಚಿಮದಲ್ಲಿ 10.80ಮೀ ಅಗಲದ ಹಾಗೂ ಪೂರ್ವದಲ್ಲಿ 7.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸದರಿ ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೊಟೇಲ್ ಉದ್ಯಮ ನಡೆಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ನಿಗಧಿತ ಅವಧಿಯೊಳಗೆ 2ಆಕ್ಷೇಪಣಾ ಅರ್ಜಿಗಳು ಸ್ವೀಕೃತವಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಪ್ರಸ್ತಾವಿತ ಜಾಗಕ್ಕೆ ಪಶ್ಚಿಮದಲ್ಲಿ 10.80ಮೀ ಹಾಗೂ ಪೂರ್ವದಲ್ಲಿ 7.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾದ ಮಡಿಕೇರಿ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಸರ್ಕಾರವು ಮಡಿಕೇರಿ ನಗರವನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಈ ನಗರಕ್ಕೆ ಆಗಮಿಸುವ ಪ್ರವಾಸಿಗರ ಅಗತ್ಯತೆಗಳನ್ನು ಪೂರೈಸುವ (ವಸತಿ ಹಾಗೂ ಊಟದ ವ್ಯವಸ್ಥೆ) ಸಾರ್ವಜನಿಕ ಹಿತಾಸಕ್ತಿಯಿಂದಲೂ ಪ್ರಸ್ತಾವಿತ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿರುತ್ತಾರೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಸದರಿ ಪ್ರಕರಣದ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಕೊಡಗನ್ನು ಈಗಾಗಲೇ ಪ್ರವಾಸೋದ್ಯಮ ಜಿಲ್ಲೆಯಾಗಿ ಸರ್ಕಾರವೇ ಘೋಷಿಸಿರುವುದರಿಂದ ಮಡಿಕೇರಿ ನಗರದಲ್ಲಿ ಹೊಟೇಲ್‌ಗಳು ಹಾಗೂ ರೆಸಾರ್ಟ್‌ಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದು, ಪ್ರವಾಸಿಗರಿಗೆ ಅನಾನುಕೂಲತೆಗಳು ಅಧಿಕವಾಗುವುದರಿಂದ ಇವುಗಳನ್ನು ಬಗೆಹರಿಸಿ, ಸಾರ್ವಜನಿಕರಿಗೆ ಅನುಕೂಲತೆ ಮಾಡುವ ಹಿತದೃಷ್ಟಿಯಿಂದ ಬಂದಿರುವ ಆಕ್ಷೇಪಣೆಗಳನ್ನು ನಗಣ್ಯಗೊಳಿಸಲು ಅಧ್ಯಕ್ಷರು ಸೂಚಿಸಿದರು. ಸದರಿ ಜಾಗದ ಅಕ್ಕಪಕ್ಕದಲ್ಲಿ ಈಗಾಗಲೇ ವಾಣಿಜ್ಯ ಚಟುವಟಿಕೆಗಳು ಕಂಡುಬಂದಿದ್ದು, ಪ್ರಸ್ತಾವನೆಯನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದ ಅಂಗೀಕಾರ ನೀಡಲಾಯಿತು.

**4) ವಿಷಯ ಸಂಖ್ಯೆ 4:– ಅರ್ಜಿದಾರರು ಶ್ರೀ ಆರ್.ಜೆ.ಪದ್ಮರಾಜ್ ಮತ್ತು ಶ್ರೀ ಆರ್. ಮುರಳೀಧರನ್.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ.47/5 ರಲ್ಲಿ 0.50ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಹಾಗೂ ವಸತಿ ಗೃಹ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಅರ್ಜಿದಾರರಾದ ಶ್ರೀ ಆರ್.ಮುರಳೀಧರನ್ ಮತ್ತು ಆರ್.ಜೆ.ಪದ್ಮರಾಜ್ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತಿದ್ದು, ಉತ್ತರದಲ್ಲಿ ಮಡಿಕೇರಿಯಿಂದ ವಿರಾಜಪೇಟೆಗೆ ಹೋಗುವ 13.8ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಹಾಗೂ ಪಶ್ಚಿಮದಲ್ಲಿ 5.5ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಹಾಗೂ ವಸತಿ ಗೃಹ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿಯಿಂದ ವಿರಾಜಪೇಟೆಗೆ ಹೋಗುವ 13.80ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಹಾಗೂ ಪಶ್ಚಿಮದಲ್ಲಿ 5.50ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಈ ಜಾಗದ ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಕರ್ಯಗಳನ್ನು ಪರಿಗಣಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಸ್ತಾವಿತ ಜಾಗವನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದಾಗಿರುತ್ತದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಸದರಿ ಪ್ರಕರಣದ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಕೊಡಗನ್ನು ಈಗಾಗಲೇ ಪ್ರವಾಸೋದ್ಯಮ ಜಿಲ್ಲೆಯಾಗಿ ಸರ್ಕಾರವೇ ಘೋಷಿಸಿರುವುದರಿಂದ ಮಡಿಕೇರಿ ನಗರದಲ್ಲಿ ಹೋಟೇಲ್‌ಗಳು ಹಾಗೂ ರೆಸಾರ್ಟ್‌ಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದು, ಪ್ರವಾಸಿಗರಿಗೆ ಅನಾನುಕೂಲತೆಗಳು ಅಧಿಕವಾಗುವುದರಿಂದ ಇವುಗಳನ್ನು ಬಗೆಹರಿಸಿ, ಸಾರ್ವಜನಿಕರಿಗೆ ಅನುಕೂಲತೆ ಮಾಡುವ ಹಿತದೃಷ್ಟಿಯಿಂದ, ಸದರಿ ಜಮೀನಿನಲ್ಲಿ ಪ್ರಕೃತಿ ಸೌಂದರ್ಯವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ವಾಣಿಜ್ಯ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಲು, ಪ್ರಸ್ತಾವನೆಯನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯಲ್ಲಿ ತೀರ್ಮಾನಿಸಿ ಸರ್ವಾನುಮತದ ಅಂಗೀಕಾರ ನೀಡಲಾಯಿತು.

## 5) ವಿಷಯ ಸಂಖ್ಯೆ 5:– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

**1. ಗದ್ದಿಗೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಉದ್ಯಾನವನದ ಅಧಿಕ ವೆಚ್ಚಕ್ಕೆ ದರಪಟ್ಟಿ ಸಲ್ಲಿಸಿರುವ ಬಗ್ಗೆ.**

**ಟಿಪ್ಪಣಿ:–**ಗದ್ದಿಗೆ ವ್ಯಾಪ್ತಿಯ ಅಂದಾಜು 5.00ಎಕರೆ ಜಮೀನಿನಲ್ಲಿ ಉದ್ಯಾನವನವನ್ನು ಮೆ॥ ಗ್ರೀನ್ ಸ್ಪೇಸ್ ಲ್ಯಾಂಡ್ ಸ್ಕೇಪ್ಸ್ ಇಂಡಿಯಾ ಪ್ರೈ.ಲಿ. ಬೆಂಗಳೂರು, ರವರು ಅಭಿವೃದ್ಧಿ ಪಡಿಸುತ್ತಿದ್ದು, ಈಗಾಗಲೇ ಕಾಮಾಗಾರಿಯು ಪ್ರಗತಿಯಲ್ಲಿದ್ದು, ನೀರಿನ ಸೌಲಭ್ಯಕ್ಕಾಗಿ ಬೋರ್‌ವೆಲ್‌ನ್ನು ಕೊರೆಯಲಾಗಿದೆ. ಸದರಿಯವರು ಈ ಮೊದಲು ಸಲ್ಲಿಸಿದ್ದ ದರಪಟ್ಟಿಯಲ್ಲಿ ಬೋರ್‌ವೆಲ್ ಆಳ 200ಅಡಿ ಎಂದು ನಿಗಧಿಪಡಿಸಿದ್ದು, ಬೋರ್‌ವೆಲ್ ಕೊರೆಯುವಾಗ 200ಅಡಿಗೆ ನೀರಿನ ಗರಿಷ್ಠ ಪ್ರಮಾಣ ಬಂದಿಲ್ಲವಾದ್ದರಿಂದ ಅದನ್ನು ಹೆಚ್ಚಿಸಿ, 305ಅಡಿ ಒಟ್ಟು 505ಅಡಿ ಬೋರ್‌ವೆಲ್‌ನ್ನು ಕೊರೆಯಲಾಗಿದೆ. ಈ ಬಾಪ್ತು ಹೆಚ್ಚುವರಿ ಮೊಬಲಗು ರೂ. 2,55,150/–ಆಗಿರುವುದಾಗಿದೆ.

ಹಾಗೂ ಸದರಿ ಉದ್ಯಾನವನದಲ್ಲಿ ಅಭಿವೃದ್ಧಿ ಪಡಿಸಿರುವ ಕಾಲುದಾರಿಗೆ ಪೇವಿಂಗ್ ಹಾಗೂ ಸ್ಟೆಪ್ಪಿಂಗ್ ಸ್ಟೋನ್ಸ್ (ಟೈಲ್ಸ್) ಹಾಕಿರುವುದರ ಬಾಪ್ತು ರೂ. 4,43,820/-ಆಗಿದ್ದು, ಈ ಎರಡರ ಬಾಬ್ತು ಒಟ್ಟು ಮೊತ್ತ 6,98,970/- ರೂಪಾಯಿಗಳ ಹೆಚ್ಚುವರಿ ದರಪಟ್ಟಿಯನ್ನು ಮೆ॥ ಗ್ರೀನ್ ಸ್ಪೇಸ್ ಲ್ಯಾಂಡ್ ಸ್ಕೇಪ್ಸ್ ಇಂಡಿಯಾ ಪ್ರೈ.ಲಿ., ಬೆಂಗಳೂರು ರವರು ಸಲ್ಲಿಸಿರುತ್ತಾರೆ. ಇದು ಉದ್ಯಾನವನವನ್ನು ನಿರ್ಮಿಸುವ/ನಿರ್ವಹಿಸುವ ನಿಟ್ಟಿನಲ್ಲಿ ಅತ್ಯವಶ್ಯವಾಗಿರುವುದರಿಂದ ಸದರಿ ಹೆಚ್ಚುವರಿ ದರಪಟ್ಟಿಯನ್ನು ಅಂಗೀಕರಿಸಬಹುದಾಗಿತ್ತದೆ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-**ಯೋಜನೆಯ ವಿವರಗಳನ್ನು ಸಭೆಯಲ್ಲಿ ಆಯುಕ್ತರು ವಿವರಿಸಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲು ಪೂರ್ಣ ಅಧಿಕಾರವನ್ನು ಆಯುಕ್ತರಿಗೆ ನೀಡಲಾಯಿತು.

**2. <u>ಗದ್ದಿಗೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಉದ್ಯಾನವನಕ್ಕೆ ಸೀಮಿತವಾದ ಪ್ರದೇಶಕ್ಕೆ ಮಾತ್ರ ಚೈನ್‌ಲಿಂಕ್ ಕಾಂಪೌಂಡ್ ಗೋಡೆಯನ್ನು ಅಳವಡಿಸುವ ಬಗ್ಗೆ.</u>**

**ಟಿಪ್ಪಣಿ:-** ಗದ್ದಿಗೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಉದ್ಯಾನವನಕ್ಕೆ ಸೀಮಿತವಾದ ಪ್ರದೇಶಕ್ಕೆ ಮಾತ್ರ ಚೈನ್‌ಲಿಂಕ್ ಕಾಂಪೌಂಡ್ ಗೋಡೆಯನ್ನು ಅಳವಡಿಸಲು ಟೆಂಡರ್ ಆಹ್ವಾನಿಸಲಾಗಿ ಸ್ವೀಕರಿಸಿರುವ 2 ಟೆಂಡರುಗಳಲ್ಲಿ ಮೆ॥ ಗ್ರೀನ್ ಸ್ಪೇಸ್ ಲ್ಯಾಂಡ್ ಸ್ಕೇಪ್ಸ್ ಇಂಡಿಯಾ ಪ್ರೈ.ಲಿ.ಬೆಂಗಳೂರು ರವರು ಸಲ್ಲಿಸಿರುವ ದರಪಟ್ಟಿಯು ಅತ್ಯಂತ ಕಡಿಮೆ ದರದ್ದಾಗಿರುವುದರಿಂದ (ನಮೂದಿಸಿರುವ ದರ ರೂ.19,93,163.00)ಇದನ್ನು ಅಂಗೀಕರಿಸಿ ಚೈನ್ ಲಿಂಕ್ ಅಳವಡಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಅದರಂತೆ ಕೆಲಸವನ್ನು ಕೈಗೆತ್ತಿಕೊಂಡು ಕೆಲಸವು ಪ್ರಗತಿಯಲ್ಲಿರುತ್ತದೆ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**ಯೋಜನೆಯ ವಿವರಗಳನ್ನು ಸಭೆಯಲ್ಲಿ ಆಯುಕ್ತರು ವಿವರಿಸಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲು ಪೂರ್ಣ ಅಧಿಕಾರವನ್ನು ಆಯುಕ್ತರಿಗೆ ನೀಡಲಾಯಿತು.

**<u>3. ಪ್ರಾಧಿಕಾರದ ಕಚೇರಿ ಕಟ್ಟಡವನ್ನು ದುರಸ್ಥಿ ಪಡಿಸುವ ಬಗ್ಗೆ.</u>**

**ಟಿಪ್ಪಣಿ:-** ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡವು ಮುಂಗಾರು ಮಳೆಯಿಂದಾಗಿ ತುಂಬಾ ಶಿಥಿಲಗೊಂಡಿರುವುದರಿಂದ ಹಾಗೂ ಕಟ್ಟಡದ ಸೋರುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಲುಮಿನಿಯಂ ಶೀಟ್ಸ್ ಅಳವಡಿಸಿ ಕಟ್ಟಡವನ್ನು ದುರಸ್ಥಿಗೊಳಿಸುವುದು ಅತ್ಯವಶ್ಯಕವಾಗಿರುತ್ತದೆ. ಹಾಗೂ ಕಛೇರಿಗೆ ಅತ್ಯವಶ್ಯಕವಾಗಿರುವ ಸಿಂಟೆಕ್ಸ್ ನೀರಿನ ಟ್ಯಾಂಕ್, ವಾಷ್ ಬೇಸನ್, ಪೈಪ್‌ಗಳು, ಹೊಸ ಸೆಪ್‌ಟಿಕ್ ಟ್ಯಾಂಕ್ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಲು ಮತ್ತು ಪ್ರಾಧಿಕಾರದಿಂದ ಮಾದರಿ ಮಳೆಕುಯ್ಲು ಯೋಜನೆಯನ್ನು ಹಮ್ಮಿಕೊಂಡು ಇದನ್ನು ಸಹ ಕಾರ್ಯರೂಪಕ್ಕೆ ತರಲು ವೆಚ್ಚ ಅಂದಾಜು ರೂ. 5.50ಲಕ್ಷ ದರವನ್ನು ನಿಗಧಿಪಡಿಸಿ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-** ಅತ್ಯವಶ್ಯಕವಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಲು ಸಭೆಯು ಒಪ್ಪಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ, ಟೆಂಡರ್ ಕರೆದು ಕಾರ್ಯ ನಿರ್ವಹಿಸಲು ಪೂರ್ಣ ಅಧಿಕಾರವನ್ನು ಆಯುಕ್ತರಿಗೆ ನೀಡಿ, ಸರ್ವಾನುಮತದ ಅಂಗೀಕಾರ ನೀಡಿತು.

**<u>4. ಪ್ರಾಧಿಕಾರದ ಕಛೇರಿ ಉಪಯೋಗಕ್ಕೆ ವಾಹವನ್ನು ಬಾಡಿಗೆ ರೂಪದಲ್ಲಿ ಪಡೆದಿರುವ ಬಗ್ಗೆ.</u>**

**<u>ಟಿಪ್ಪಣಿ</u>**:- ಸರ್ಕಾರಿ ಪತ್ರ ಸಂಖ್ಯೆ ನಅಇ/ಮೈಅಪ್ರಾ/2011, ದಿನಾಂಕ 01-08-2011 ರಲ್ಲಿ ಆಯುಕ್ತರ ದೈನಂದಿನ ಕಛೇರಿ ಕೆಲಸದ ನಿರ್ವಹಣೆಗೆ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಸರ್ಕಾರದ ಅನುಮೋದನೆ ನೀಡಿರುವಂತೆ ವಾಹನವನ್ನು ಬಾಡಿಗೆ ರೂಪದಲ್ಲಿ ಪಡೆಯಲು ಟೆಂಡರು ಆಹ್ವಾನಿಸಲಾಗಿ ನಿಗಧಿತ ಅವಧಿಯೊಳಗೆ ಸ್ವೀಕರಿಸಿರುವ 2 ಟೆಂಡರುಗಳ ಪೈಕಿ ಮೆ॥ ರಿಧಮ್ ಟ್ರಾವಲ್ಸ್ ರವರು ಸಲ್ಲಿಸಿರುವ ದರಪಟ್ಟಿಯು ಅತ್ಯಂತ ಕಡಿಮೆ ದರದ್ದಾಗಿರುವುದರಿಂದ ಅವರು ನಮೂಧಿಸಿರುವ ಮಾಸಿಕ ದರ

ರೂ. 19,990/– (ರೂ.ಹತ್ತೊಂಭತ್ತು ಸಾವಿರದ ಒಂಬೈನೂರ ತೊಂಭತ್ತು) ಆಗಿರುತ್ತದೆ. ಇವರ ದರಪಟ್ಟಿಯನ್ನು ಅಂಗೀಕರಿಸಿ ಅಕ್ಟೋಬರ್ 2011 ರಿಂದ ಜಾರಿಗೆ ಬರುವಂತೆ ಬಾಡಿಗೆ ಆಧಾರದ ಮೇರೆ ಇನ್ನೋವಾ ಕಾರು ಸಂಖ್ಯೆ ಕೆ.ಎ.51.ಎಂ388 ಅನ್ನು ವಾಹನ ಚಾಲಕರೊಂದಿಗೆ ಕಛೇರಿಯಲಿ ಕರ್ತವ್ಯಕ್ಕೆ ಹಾಜರಾಗುವಂತೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಅದರಂತೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಪ್ರಸ್ತಾವನೆಯನ್ನು ಸಭಾ ಅನುಮೋದಬೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಸಭೆ ಮುಕ್ತಾಯಗೊಂಡು ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ನಿರ್ಗಮಿಸಿದ ನಂತರ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯರವರು ಕಚೇರಿಗೆ ಹಾಜರಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಹಾಜರಾತಿಗೆ ಸಹಿ ಹಾಕಿರುತ್ತಾರೆ. ಆದರೆ ಅದಾಗಲೇ ಸಭೆಯನ್ನು ಮುಕ್ತಾಯಗೊಳಿಸಿತ್ತಾದರಿಂದ ಅವರ ಅಭಿಪ್ರಾಯವನ್ನು ಸಭೆಯಲ್ಲಿ ದಾಖಲಿಸಿರುವುದಿಲ್ಲ.

**ಸಹಿ/–**
**(ಶ್ರೀ ಪಿ.ಸಜಿಲ್ ಕೃಷ್ಣ)**
**ಅಧ್ಯಕ್ಷರು ,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**
**(ಶ್ರೀ ಅಶಾದ್ ಉರ್ ರೆಹೆಮಾನ್ ಷರೀಫ್)**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**“ನಕಲು”**
**ಸಹಿ/–**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**